ಸದನದಲ್ಲಿರುವವರಿಗೆ ಅರ್ಥ ಶಾಸ್ತ್ರದ ಬಗ್ಗೆ ರಾಜ್ಯಶಾಸ್ತ್ರದ ಬಗ್ಗೆ ಕನಿಷ್ಠ ಜ್ಞಾನ ಇಲ್ಲವೆಂದು ತಿಳಿದುಕೊಂಡು ಮಾಡಬೇಡಿ. ನೀವು ಅಂದರೆ ಈ ಸರ್ಕಾರ ಕನಿಷ್ಠ ಜ್ಞಾನ ಪಡೆಯುವಂಥ ಕೆಲಸ ಮಾಡಿ. It should try to get atleast elementary knowledge of politics and economics before it places such a document before this House.

6. ಸಂವಿಧಾನ ತಿದ್ದುಪಡಿ ಸ್ಥಿರೀಕರಣ ನಿರ್ಣಯ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ,

"ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಭಾರತ ಸಂವಿಧಾನದ 368ನೇ ಅನುಚ್ಛೇದ ಖಂಡಿಕೆ (ಬಿ) ಕಲಮು(2)ರಲ್ಲಿ ಬರುವ 1992ರ ತಿದ್ದುಪಡಿ (ಎಪ್ಪತ್ತೇಳನೆಯ ತಿದ್ದುಪಡಿ) ವಿಧೇಯಕವನ್ನು ಸಂವಿಧಾನದ ಉದ್ದೇಶಕ್ಕೆಂದು ಈ ಸದನವು ಸ್ಥಿರೀಕರಿಸುತ್ತದೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ಭಾರತ ಸಂವಿಧಾನದ 368ನೇ ಅನುಚ್ಛೇದ ಖಂಡಿಕೆ (ಬಿ) ಕಲಮು(2)ರಲ್ಲಿ ಬರುವ 1992ರ ತಿದ್ದುಪಡಿ (ಎಪ್ಪತ್ತೇಳನೆಯ ತಿದ್ದುಪಡಿ) ವಿಧೇಯಕವನ್ನು ಸಂವಿಧಾನದ ಉದ್ದೇಶಕ್ಕೆಂದು ಈ ಸದನವು ಸ್ಥಿರೀಕರಿಸುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

5. ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, 1993

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

+ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವ ಈ ಕಾಯ್ದೆ 5.2.92ರಲ್ಲಿ ನೋಟಿಫಿಕೇಷನ್ ಆಗಿ ಈ ಕಾಯ್ದೆ 1.8.92ರಲ್ಲಿ ಜಾರಿಗೆ ಬಂದಿದೆ. ಜಾರಿಗೆ ಬಂದಮೇಲೆ ಆ ದಿನಾಂಕದಿಂದ 60 ದಿನಗಳ ಒಳಗೆ ಅಪ್ಲಿಕೇಷನ್ಸ್ ಹಾಕಬೇಕಾಗಿತ್ತು. ಯಾರೇ ಅಕ್ರಮವಾಗಿ 31.3.90ಕ್ಕೆ ಹಿಂದೆ ಮನೆ ಕಟ್ಟಿರತಕ್ಕವರು ಇದು ಜಾರಿಗೆ ಬಂದ 1.8.92ರಿಂದ 60 ದಿವಸಗಳಲ್ಲಿ ಅರ್ಜಿ ಹಾಕಬೇಕಾಗಿತ್ತು. ಅದು ಕಾರಣಾಂತರದಿಂದ ಮುಂದೆ ಹೋಗಿದ್ದರಿಂದ 2 ವರ್ಷ ಮುಂದು ಹಾಕಬೇಕೆಂದು